## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಪೂರ್ವ) ವಲಯ
### ಶಿವಾಜಿನಗರ ವಿಭಾಗ, ವಸಂತನಗರ ಉಪವಿಭಾಗ

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರ ಆದೇಶದಂತೆ ದಿನಾಂಕ:20-06-2022 ರಂದು ವಾರ್ಡ್ ಸಂಖ್ಯೆ:110 ಸಂಪಂಗಿರಾಮನಗರ, ಹಳೆ ಪಲ್ಲವಿ ಟಾಕೀಸ್ ಪಕ್ಕ, ರಾಜಾರಾಮ್ ಮೋಹನ್‌ರಾಯ್ ರಸ್ತೆ ಬೆಂಗಳೂರು ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಸಭೆಗೆ ಹಾಜರಾದವರು.**

| ಕ್ರಮ ಸಂಖ್ಯೆ: | ಹೆಸರು | ಸಮಿತಿ ಸಭೆಯ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ರಮೇಶ್ | ನೋಡಲ್ ಅಧಿಕಾರಿಗಳು | |
| 2 | ಶ್ರೀ. ಧರ್ಮರಾಜ್ ಜಿ ನಾಯಕ್ | ಸಹಾಯಕ ಅಭಿಯಂತರರು (ಪ್ರಭಾರ) | |
| 3 | ಶ್ರೀ. ಲಕ್ಷ್ಮೀನಾರಾಯಣ | ಕೆಲಸ ಪರಿವೀಕ್ಷಕರು | |
| 4 | ಶ್ರೀ.ವೆಂಕಟಚಲಪತಿ | ಹಿರಿಯ ಆರೋಗ್ಯ ನಿರೀಕ್ಷಕರು (ಬಿಬಿಎಂ.ಪಿ) | |
| 5 | ಶ್ರೀ. ಶ್ರೀನಿವಾಸ್ ವಿ. | ಕಿರಿಯ ಆರೋಗ್ಯ ನಿರೀಕ್ಷಕರು (ಬಿಬಿಎಂಪಿ) | |
| 6 | ಶ್ರೀ. ಈರಣ್ಣ | ಹಿರಿಯ ಆರೋಗ್ಯ ನಿರೀಕ್ಷಕರು (ಬಿಬಿಎಂಪಿ) | |
| 7 | ಶ್ರೀ.ಪ್ರಕಾಶ್ ನಡುಂಗಾಡಿ | ಎಎಪಿ ಉಸ್ತುವಾರಿ | |
| 8 | ಶ್ರೀ.ರಾಮಲಿಂಗರಡ್ಡಿ | ಸದಸ್ಯರು | |
| 9 | ಶ್ರೀ.ಕಾಂತರಾಜು | ಸದಸ್ಯರು | |

**ಸಭೆಯಲ್ಲಿ ಚರ್ಚಿಸಿರುವ ವಿಷಯಗಳು**

1) ಸಂಪಂಗಿರಾಮನಗರ 8ನೇ ಅಡ್ಡರಸ್ತೆಯಲ್ಲಿನ ಶೌಚಾಲಯವನ್ನು ನವೀಕರಿಸಲು
   ಕ್ರಮ: ಹಿರಿಯ ಆರೋಗ್ಯ ಪರೀಕ್ಷಕರಿಗೆ ತಿಳಿಸಿದರು.
2) ವಾರ್ಡ್ ನಂ.110 ರ ಸಂಪಂಗಿರಾಮನಗರದ 4ನೇ ಮುಖ್ಯರಸ್ತೆಯಿಂದ 12ನೇ ಕ್ರಾಸ್‌ನವರಿಗೆ ರಾಜಕಾಲುವೆ ಕಾಮಗಾರಿಯು ಮಂದಗತಿಯಲ್ಲಿ ನಡೆಯುತ್ತಿದ್ದು, ಕೂಡಲೇ ಪೂರ್ಣಗೊಳಿಸಲು ತಿಳಿಸಿದರು.
   ಕ್ರಮ: ಕಾರ್ಯಪಾಲಕ ಅಭಿಯಂತರರು ಬೃಹತ್ ನೀರುಗಾಲುವೆ (ಪೂರ್ವ) ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.
3) ವಾರ್ಡ್ ಸಂಖ್ಯೆ:110 ರ ಅಸ್ಪತ್ರೆ ರಸ್ತೆ ಮತ್ತು ಅಲಿಅಸ್ಕರ್ ರಸ್ತೆಗಳಲ್ಲಿ ಬೀದಿ ದೀಪಗಳು ಉರಿಯದೇ ಇರುವುದರಿಂದ ಕ್ರಮಕೈಗೊಳ್ಳಲು ಸಭೆಯಲ್ಲಿ ತಿಳಿಸಿದರು.
   ಕ್ರಮ: ಕಾರ್ಯಪಾಲಕ ಅಭಿಯಂತರರು ಬೀದಿ ದೀಪಗಳ ನಿರ್ವಹಣೆ (ಪೂರ್ವ) ರವರಿಗೆ ಕ್ರಮಕೈಗೊಳ್ಳಲು ಸಭೆಯಲ್ಲಿ ತಿಳಿಸಿದರು.
4) ವಾರ್ಡ್ ಸಂಖ್ಯೆ:110 ರ ಅಸ್ಪತ್ರೆ ರಸ್ತೆಯಲ್ಲಿ ಕಸದ ಬ್ಲಾಕ್‌ಸ್ಪಾಟ್ ತೆರವುಗೊಳಿಸಲು ಸೂಚಿದರು.
   ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮವಹಿಸಲು ತಿಳಿಸಿದರು.
5) ವಾರ್ಡ್ ಸಂಖ್ಯೆ:110 ರ ಬನ್ನಪ್ಪ ಪಾರ್ಕ್‌ನ್ನು ಮಕ್ಕಳ ಆಟದ ಮೈದಾನವನ್ನಾಗಿ ಪರಿವರ್ತಿಸಲು ಸೂಚಿಸಿದರು.

Scanned with CamSca

ಕ್ರಮ: ಕಾಮಗಾರಿ ಇಲಾಖೆಯಿಂದ ಕ್ರಮವಹಿಸಲಾಗುವುದೆಂದು ತಿಳಿಸಿದರು.

6) ವಾರ್ಡ್ ಸಂಖ್ಯೆ:110 ರಲ್ಲಿ ಪೌರಕಾರ್ಮಿಕರ ಕೊರತೆಯಿಂದ ರಸ್ತೆ ಗುಡಿಸುವ ಕೆಲಸಕ್ಕೆ ತೊಂದರೆಯಾಗುತ್ತಿದ್ದು ಹೆಚ್ಚುವರಿ ಪೌರಕಾರ್ಮಿಕರನ್ನು ನೇಮಿಸಿಕೊಳ್ಳುವಂತೆ ಸೂಚಿಸಿದರು.
ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಯಿತು..

7) ವಾರ್ಡ್ ಸಂಖ್ಯೆ:110 ವ್ಯಾಪ್ತಿಯಲ್ಲಿ ಕನಿಷ್ಠ 50 ಸಿ.ಸಿ ಕ್ಯಾಮರ್‌ಗಳ ಅವಶ್ಯಕತೆ ಇದೆ.
ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾಮಗಾರಿ ಇಲಾಖೆಗೆ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

8) ವಾರ್ಡ್ ಸಮಿತಿ ಸಭೆಗೆ ಬೆಂಗಳೂರು ನೀರು ಸರಬರಾಜು ಒಳಚರಂಡಿ ಮಂಡಳಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ತೋಟಗಾರಿಕೆ ಇಲಾಖೆ, ಸ್ಮಾರ್ಟ್ ಸಿಟಿ ಇಲಾಖೆ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಇಲಾಖೆಗಳ ಅಧಿಕಾರಿಗಳು ಗೈರು ಹಾಜರು ಇದ್ದು, ಇನ್ನು ಮುಂದೆ ತಪ್ಪದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗುವಂತೆ ಸೂಚಿಸುತ್ತಾ, ಅಧ್ಯಕ್ಷರು ಸಮಿತಿಯಲ್ಲಿ ಎಲ್ಲಾ ಸದಸ್ಯರಿಗೂ ಮೇಲ್ಕಂಡ ವಿಷಯಗಳನ್ನು ತಿಳಿಸುತ್ತಾ, ನಿರ್ಣಯಿಸಲು ಕೋರಿದರು. ಸಮಿತಿಯ ಸದಸ್ಯರು ಒಪ್ಪಿಗೆ ನೀಡುತ್ತಾ, ನಿರ್ಣಯಗಳನ್ನು ಅಂಗೀಕರಿಸಿ ಮೇಲಾಧಿಕಾರಿಗಳಿಗೆ ಕ್ರಮವಹಿಸಲು ತಿಳಿಸಿದರು.

9) ಸಮಿತಿಯ ಕಾರ್ಯದರ್ಶಿಯವರು ಸಭೆಗೆ ಹಾಜರಾದ ಎಲ್ಲರಿಗೂ ವಂದನೆಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ವಾರ್ಡ್-110 ಸಂಪಂಗಿರಾಮನಗರ
ಬಿ.ಬಿ.ಎಂ.ಪಿ

ಸದಸ್ಯ ಕಾರ್ಯದರ್ಶಿಗಳು
ವಾರ್ಡ್-110, ಸಂಪಂಗಿರಾಮನಗರ
ಬಿ.ಬಿ.ಎಂ.ಪಿ

ಪ್ರತಿಗಳನ್ನು:

1) ಮಾನ್ಯ ಆಡಳಿತಗಾರರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
2) ಮಾನ್ಯ ಮುಖ್ಯ ಆಯುಕ್ತರು ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ.
3) ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಆಪ್ತ ಕಾರ್ಯದರ್ಶಿ ರವರ ಅವಗಾಹನೆಗೆ ಕಳುಹಿಸಲಾಗಿದೆ
4) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
5) ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಕಳುಹಿಸಲಾಗಿದೆ
6) ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರ ಅವಗಾಹನೆಗೆ ಕಳುಹಿಸಲಾಗಿದೆ
7) ಕಛೇರಿ ಕಡತಕ್ಕೆ.

Scanned with CamSca